ಒ.ಎಸ್.-44 /2021
ಡಿ.ಡಬ್ಲ್ಯು- 03

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

| | |
|---|---|
| ಸಾಕ್ಷಿದಾರರ ಹೆಸರು | ಯಾದವ ಶೇರಿಗಾರ |
| ತಂದೆಯ ಹೆಸರು | ಕೊರಗ ಶೇರಿಗಾರ |
| ವಯಸ್ಸು | 69 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಉಡುಪಿ |

ದಿನಾಂಕ 10-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - 7 ನೇ ಪ್ರತಿವಾದಿಯವರ ಪರ ಶ್ರೀ ಎನ್ ಕೆ. ಎ ವಕೀಲರಿಂದಃ**

ಕಡಿಯಾಳಿಯ ತಂತ್ರಿ ಲೇನ್ ನಲ್ಲಿ ವಾಸವಿದ್ದ ಚೆಲುವಮ್ಮನವರು ನಮ್ಮ ನೆರೆಮನೆಯವರಾಗಿದ್ದು ಅವರ ಪರಿಚಯ ಇತ್ತು. ಚೆಲುವಮ್ಮನವರ ಮನೆಯು ನಮ್ಮ ಮನೆಯಿಂದ ಸುಮಾರು 20 ಮೀ ದೂರದಲ್ಲಿ ಇತ್ತು. ಚೆಲುವಮ್ಮನವರು ನನ್ನನ್ನು ದಸ್ತಾವೇಜು ಬರಹಗಾರರಾದ ಪೃಥ್ವಿ ರವರ ಕಚೇರಿಗೆ ಕರೆದುಕೊಂಡು ಹೋಗಿದ್ದರು. ನಮ್ಮ ಕಾರಿನಲ್ಲಿಯೇ ಹೋಗಿದ್ದೆವು. ಚೆಲುವಮ್ಮನವರು ನಿಮ್ಮ ಸಹಿಯು ಒಂದು ದಾಖಲೆಗೆ ಬೇಕು ಎಂದು ಹೇಳಿದ್ದರು. ಸಾಕ್ಷಿಯವರು ಒಂದು ದಾಖಲೆ ನೋಡಿ ಇದು ಚೆಲುವಮ್ಮನವರು ಮಾಡಿದ ದಾಖಲೆ ಎಂದು ಗುರರುತಿಸಿದ್ದು ಅದು ವಿಲ್ ನಾಮೆ ಆಗಿದ್ದು ಅದನ್ನು ಈಗಾಗಲೇ ನಿಡಿ 1 ಎಂದು ಗುರುತಿಸಲಾಗಿದೆ. ನಿಡಿ 1 ರ 1 ನೇ ಪುಟದ ಕೆಳ ಭಾಗದಲ್ಲಿರುವ ಒಂದು ಹೆಬ್ಬೆರಳಿನ ಗುರುತು, 1 ನೇ ಪುಟದಲ್ಲಿರುವ ಹಿಂಭಾಗದಲ್ಲಿರುವ 2 ಹೆಬ್ಬೆರಳಿನ ಗುರುತುಗಳು, 2 ನೇ ಪುಟದ ಕೆಳಭಾಗದಲ್ಲಿರುವ ಒಂದು ಹೆಬ್ಬೆರಳಿನ ಗುರುತು, 3 ನೇ ಪುಟದಲ್ಲಿರುವ ಒಂದು ಹೆಬ್ಬೆರಳಿನ ಗುರುತುಗಳನ್ನು ನೋಡಿ ಇವು ಚೆಲುವಮ್ಮನವರ ಹೆಬ್ಬೆರಳಿನ ಗುರುತುಗಳು ಎಂದು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಡಿ 1(ಎ), 1(ಬಿ), 1(ಸಿ), 1(ಡಿ), ಮತ್ತು 1(ಇ) ಎಂದು ಗುರುತಿಸಲಾಗಿದೆ. ಸಾಕ್ಷಿಯವರು ನಿಡಿ 1 ರ ಮೂರನೇ ಪಟದಲ್ಲಿರುವ ಕ್ರಮ ಸಂಖ್ಯೆ 2 ರಲ್ಲಿರುವ ಸಹಿಯನ್ನು ನನ್ನ ಸಹಿ

ಎಂದು ಗುರುತಿಸಿದ್ದು ಅದನ್ನು ಈಗಗಲೇ ನಿಪಿ 1(ಐ) ಎಂದು ಗುರುತಿಸಲಾಗಿದೆ. ಚಂದ್ರ ಶೇಖರರವರು ನನ್ನೊಂದಿಗೆ ಸಾಕ್ಷಿದಾರರಾಗಿ ರುಜು ಮಾಡಿರುತ್ತಾರೆ. ಸಾಕ್ಷಿಯವರು ಮೊದಲು ಚಂದ್ರ ಶೇಖರರವರ ಸಹಿ ನನಗೆ ನೆನಪು ಇಲ್ಲವೆಂದು ಹೇಳಿ ನಂತರ 3 ನೇ ಪುಟದ ಕ್ರಮ ಸಂಖ್ಯೆ 1 ರಲ್ಲಿರುವ ಸಹಿಯನ್ನು ಚಂದ್ರ ಶೇಖರರವರ ಸಹಿ ಎಂದು ಗುರುತಿಸಿದ್ದು ಅದನ್ನು ಈಗಾಗಲೇ ನಿಡಿ 1 (ಜಿ) ಎಂದು ಗುರುತಿಸಲಾಗಿದೆ.

ನಾನು ಮತ್ತು ಚೆಲುವಮ್ಮನವರು ನಿಡಿ 1 ಕ್ಕೆ ದಸ್ತಾವೇಜು ಬರಹಗಾರರ ಕಚೇರಿಯಲ್ಲಿ, ನಂತರ ಉಪ ನೋಂದಣಾಧಿಕಾರಿಯವರ ಕಚೇರಿಯಲ್ಲಿ ಸಹಿ ಹಾಕಿರುತ್ತೇವೆ. ನಿಡಿ 1 ರ 1 ನೇ ಪುಟದ ಹಿಂಬದಿಯಲ್ಲಿರುವ ಭಾವಚಿತ್ರವನ್ನು ನೋಡಿ ಅದು ಚೆಲುವಮ್ಮನವರ ಭಾವಚಿತ್ರವೆಂದು ಗುರುತಿಸಿರುತ್ತಾರೆ.

**ಪಾಟೀ ಸವಾಲು - ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ, ಉಡುಪಿ.